# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 73 ಗ್ರಾಪಂಕಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:08.06.2020

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ: ಕೋವಿಡ್ 19 ತಡೆ ದೃಷ್ಟಿಯಿಂದ ಸಾಂಸ್ಥಿಕ ದಿಗ್ಬಂಧನ ಮತ್ತು ಮನೆ ದಿಗ್ಬಂಧನೆಗಳಲ್ಲಿ ಗ್ರಾಮ ಪಂಚಾಯತಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ.

ಉಲ್ಲೇಖ: ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ 04.06.2020.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕೋವಿಡ್ 19 ತಡೆ ದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳಿಗೆ ಮರಳುವ ವ್ಯಕ್ತಿಗಳನ್ನು ಆರೋಗ್ಯ ಇಲಾಖೆ ನೀಡುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್.ಒ.ಪಿ) ಆಧಾರದಮೇಲೆ ಸಾಂಸ್ಥಿಕ ದಿಗ್ಬಂಧನ/ಮನೆ ದಿಗ್ಬಂಧನಗಳಲ್ಲಿ ಇರಿಸಲಾಗುತ್ತಿದೆ. ಹೀಗೆ ಮನೆ ದಿಗ್ಬಂಧನ/ಸಾಂಸ್ಥಿಕ ದಿಗ್ಬಂಧನಗಳಲ್ಲಿ ಇರಿಸಲಾಗುವ ಸಂಸ್ಥೆಗಳನ್ನು/ವ್ಯಕ್ತಿಗಳನ್ನು ಗ್ರಾಮ ಪಂಚಾಯತಿಗಳು ರಚಿಸಲಾಗಿರುವ ಕಾರ್ಯಪಡೆಗಳ ಮೂಲಕ ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ. ಈ ಸಂಬಂಧ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಲಗತ್ತಿಸಿ ಕಳುಹಿಸಿ ಅದರಂತೆ ಕ್ರಮ ಕೈಗೊಳ್ಳುವಂತೆ ತಮಗೆ ತಿಳಿಸಲಾಗಿತ್ತು.

ಉಲ್ಲೇಖಿತ ಸರ್ಕಾರದ ಪತ್ರದ ಸಂಗಡ ಕಳುಹಿಸಲಾಗಿದ್ದ ಮಾರ್ಗಸೂಚಿಗಳನ್ನು ಹಿಂಪಡೆಯಲಾಗಿದೆ. ಕೋವಿಡ್ 19 ತಡೆ ದೃಷ್ಟಿಯಿಂದ ಸಾಂಸ್ಥಿಕ ದಿಗ್ಬಂಧನ ಮತ್ತು ಮನೆ ದಿಗ್ಬಂಧನೆಗಳಲ್ಲಿ ಗ್ರಾಮ ಪಂಚಾಯತಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳ ಬಗ್ಗೆ ಮಾರ್ಗಸೂಚಿಗಳನ್ನು ಇದರೊಂದಿಗೆ ಲಗತ್ತಿಸಿದ್ದು, ಅದರಂತೆ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

B. Naveenkumar 08/06/2020.
(ನವೀನ್ ಕುಮಾರ್.ಬಿ)
ಉಪ ನಿರ್ದೇಶಕರು ಹಾಗೂ ಪದನಿಮತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
3. ಕರ್ನಾಟಕ ವಿಕಾಸ/ವೆಬ್‌ಸೈಟ್.